O.S. ನಂಬರಃ 83/2023
ಪಿ. ಡಬ್ಲ್ಯೂಃ 1

ದಿಃ 01-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಆರ್.ಎನ್.ಹೆಚ್ ರವರಿಂದಃ

ನೋಂದಾಯಿತ ಮರಣ ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಪಿ-5, ಗಣಪಿ ದೇವು ಗೌಡ ಇವರ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ-6, ಪ್ರತಿವಾದಿಯ ಜನ್ಮ ದಾಖಲೆ ಪತ್ರವನ್ನು (Subject to proof and relevancy) ನಿಪಿ-7 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ. ರವರಿಂದಃ

2. ಗಣಪಿ ದೇವು ಗೌಡ ಇವರ ಖಾಯಂ ವಾಸ್ತವ್ಯವು ಮಾನಿಗದ್ದೆ ಗ್ರಾಮ ಕಳಮನೆಯಲ್ಲಿ ಇದ್ದರು. ಎಷ್ಟು ವರ್ಷಗಳಿಂದ ಅಲ್ಲಿ ವಾಸ್ತವ್ಯ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಯ ಕಾಲದಿಂದ ಮಾಡಿಕೊಂಡು ಬಂದಿದ್ದಳು ಎಂದು ನುಡಿಯುತ್ತಾರೆ. ಅವಳು ನನ್ನ ತಂದೆಯ ಕಾಲದಿಂದ ವಾಸ್ತವ್ಯ ಮಾಡಿಕೊಂಡು ಬಂದಿದ್ದಳು ಎಂದು ತೋರಿಸಲು ಕಾಗದ

ಪತ್ರಗಳು ಇವೆಯಾ ಎಂದರೆ ಸಾಕ್ಷಿಯು ನನ್ನ ಕೈಗೆ ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಮಾನಿಗದ್ದೆ ಗ್ರಾಮದಿಂದ ಕುಂಟಕಣಿ ಗ್ರಾಮ ಅಸಳ್ಳಿಗೆ ಸುಮಾರು 2 ಕಿ.ಮೀ ದೂರವಾಗುತ್ತದೆ. ಸದರಿ ಗಣಪಿಯು ಕುಂಟಕಣಿ ಗ್ರಾಮ ಅಸಳ್ಳಿಯಲ್ಲಿ ವಾಸ್ತವ್ಯ ಮಾಡಿಕೊಂಡಿದ್ದರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಹಬ್ಬ-ಹರಿದಿನಗಳಲ್ಲಿ ಬಂದು ಹೋಗುತ್ತಿದ್ದಳು. ಎಲ್ಲಿಂದ ಎಲ್ಲಿಗೆ ಬರುತ್ತಿದ್ದಳು ಎಂದರೆ ಸಾಕ್ಷಿಯು ಕಳಮನೆಯಿಂದ ಅಸಳ್ಳಿ ಹಬ್ಬ-ಹುಣ್ಣಿಮೆಗೆ ಹೋಗುತ್ತಿದ್ದಳು ಎಂದು ನುಡಿಯುತ್ತಾರೆ. ಕಳಮನೆಯ ಗ್ರಾಮದಲ್ಲಿ ಅವಳ ಹೆಸರಿಗೆ ಆಸ್ತಿ ಏನಾದರೂ ಇತ್ತಾ ಎಂದರೆ ಇತ್ತು ಎಂದು ನುಡಿಯುತ್ತಾರೆ.

3. ಅವಳ ಹೆಸರಿಗೆ ಅಂಕೋಲಾ ತಾಲೂಕಿನ ಮಾನಿಗದ್ದೆ ಗ್ರಾಮದಲ್ಲಿ ಆಸ್ತಿಗಳು ಇದ್ದವು ಎಂದರೆ ಸರಿ. ಆ ಆಸ್ತಿಗಳು ಎಲ್ಲವೂ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿಯು ಪಿತ್ರಾರ್ಜಿತ ಆಸ್ತಿಗಳು ಇದ್ದು ನಂತರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ಅದರಲ್ಲಿ ಗಣಪಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಗಣಪಿಯು ಯಾರ ಮೇಲೆ ದಾವೆ ಮಾಡಿದ್ದಳು ಎಂದರೆ ಸಾಕ್ಷಿಯು ನಮ್ಮ ಮೇಲೆಯೇ ದಾವೆ ಮಾಡಿದ್ದಳು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಅವಳು ಎಷ್ಟು ವರ್ಷ ದಾವೆಯನ್ನು ನಡೆಸಿದ್ದಳು ಎಂದರೆ ಸಾಕ್ಷಿಯು 10-12 ವರ್ಷಗಳ ಮೇಲೆ ನಡೆಸಿದ್ದಳು ಎಂದು ನುಡಿಯುತ್ತಾರೆ. ನೀವು, ನಿಮ್ಮ ತಂದೆ ಹಾಗೂ ಗಣಪಿಯು ಒಟ್ಟಾಗಿ ವಾಸ್ತವ್ಯ ಮಾಡುತ್ತೀರಿ ಎಂದು ತೋರಿಸಲು ಕಾಗದ ಪತ್ರಗಳು

ಇರುತ್ತವೆಯಾ ಎಂದರೆ ಸಾಕ್ಷಿಯು ನಾವೆಲ್ಲರೂ ಒಟ್ಟಾಗಿ ವಾಸ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ತಂದೆಯ ರೇಷನ್ ಕಾರ್ಡನಲ್ಲಿ ನನ್ನ ಹಾಗೂ ನನ್ನ ಸಹೋದರರ ಹೆಸರು ಇತ್ತು ಎಂದರೆ ಸರಿ. ನನ್ನ ತಂದೆಯ ರೆಷನ್ ಕಾರ್ಡನಲ್ಲಿ ಗಣಪಿಯ ಹೆಸರು ಇರಲಿಲ್ಲ. ಗಣಪಿಯ ಗಂಡ ದೇವು ಗೌಡ ನನ್ನ ಚಿಕ್ಕಪ್ಪನಾಗಬೇಕು. ಗಣಪಿಗೆ ಹುಟ್ಟಿದಂತ ಗುಂಡು ಮಕ್ಕಳಾಗಲಿ ಅಥವಾ ಹೆಣ್ಣು ಮಕ್ಕಳಾಗಲಿ ಯಾವುದೇ ಸಂತತಿ ಇರಲಿಲ್ಲ ಎಂದರೆ ಸರಿ.

4. ದಾವೆಯನ್ನು ಸಲ್ಲಿಸಿದ ನಂತರ ಜಮೀನುಗಳನ್ನು ಹಿಸ್ಸೆ ಮಾಡಿ ಕೊಟ್ಟಿರುತ್ತೇವೆ. 1999 ರಿಂದ 2006 ನೇ ಸಾಲಿನತನಕ ದಾವೆ ನಡೆದಿತ್ತು ಎಂದರೆ ಸರಿ. ನಂತರ ಕೋರ್ಟ ಮುಖಾಂತರ ಸರ್ವೆ ಮಾಡಿ, ಆಕೆಯ ಪಾಲನ್ನು ಪಡೆದುಕೊಂಡಿರುತ್ತಾಳೆ ಎಂದರೆ ಸರಿ. ದಾವೆ ನಡೆಯುವ ಸಂದರ್ಭದಲ್ಲಿ ನಿಮ್ಮ ಹಾಗೂ ಗಣಪಿಯ ಮಧ್ಯ ಮಾತುಕತೆ ಇರಲಿಲ್ಲ ಎಂದರೆ ಸರಿ. ಗಣಪಿ ಗೌಡ ಎಷ್ಟನೇ ಸಾಲಿನಲ್ಲಿ ಮರಣ ಪಟ್ಟಿರುತ್ತಾಳೆ ಎಂದರೆ ನನಗೆ ಮರೆತುಹೋಗಿರುತ್ತದೆ. ದಾವೆಯು ನಡೆಯು ಕಾಲ ದಲ್ಲಿ ಆಕೆಯ ವಾಸ್ತವ್ಯ ಎಲ್ಲಿ ಇತ್ತು ಎಂದರೆ ಸಾಕ್ಷಿಯು ಮಾನಿಗದ್ದೆ ಗ್ರಾಮದ ಕಳಮನೆಯಲ್ಲಿತ್ತು ಎಂದು ನುಡಿಯುತ್ತಾರೆ. ನನ್ನ ಮನೆಯಿಂದ ಅವರ ಮನೆಯು 2 ಕಿ.ಮೀ ಅಂತರದಲ್ಲಿ ಇತ್ತು. ಗಣಪಿಗೂ ಹಾಗೂ ನನಗೂ 1999 ನೇ ಸಾಲಿನಿಂದ ಆಕೆಯು ಸಾಯುವತನಕ ನಮ್ಮ ಮಧ್ಯ ಮಾತುಕತೆ ಇರಲಿಲ್ಲ ಎಂದರೆ ಸಾಕ್ಷಿಯು 5 ವರ್ಷಗಳ ಹಿಂದೆ ನಮ್ಮ ಮನೆಗೆ ಬಂದಿದ್ದಳು ಎಂದು

ನುಡಿಯುತ್ತಾರೆ. ನಮ್ಮ ಮನೆಗೆ ಬರುವ ಸಮಯದಲ್ಲಿ ಆಕೆಯು ಓಡಾಡುತ್ತಿದ್ದಳು. ಆಕೆಯ ಯಾವಾಗಾದರೂ ಕಾರವಾರಕ್ಕೆ ಹೋಗಿದ್ದಳಾ ಎಂದರೆ ಸಾಕ್ಷಿಯು ನಾನೇ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಕಾರವಾರಿಗೆ ಕರೆದುಕೊಂಡು ಹೋಗಿರುತ್ತೀರಿ ಎಂದರೆ ಸಾಕ್ಷಿಯು ಆಕೆಯ ಹೆಸರಿನಲ್ಲಿದ್ದ ಜಮೀನನ್ನು ನನ್ನ ಹೆಸರಿಗೆ ಮಾಡಿಕೊಳ್ಳಲು ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಕಾರವಾರಕ್ಕೆ ಗಣಪಿ, ನಾನು ಹಾಗೂ ನನ್ನ ಮಗ ಅಶೋಕ ಹೋಗಿದ್ದೇವು. ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ನಾವು ಹೋದಾಗ 10 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಎಷ್ಟು ಹೊತ್ತು ಕಾರವಾರದಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ಕೆಲಸ ಮುಗಿಯುವ ತನಕ ಇದ್ದೇವೆ ಎಂದು ನುಡಿಯುತ್ತಾರೆ. ಆಕೆಯು ಹೆಬ್ಬಟ್ಟನ್ನು ಎಲ್ಲಿ ಹಾಕಿರುತ್ತಾಳೆ ಎಂದರೆ ಸಾಕ್ಷಿಯು ಕಾರವಾರಕ್ಕೆ ಹೋದಾಗ ಹಾಕಿರುತ್ತಾಳೆ ಎಂದು ನುಡಿಯುತ್ತಾರೆ. ಕಾಗದ ಪತ್ರವು ಬರವಣಿಗೆಯಲ್ಲಿತ್ತಾ ಅಥವಾ ಗಣಕೀಕೃತವಾಗಿತ್ತಾ ಎಂದರೆ ಸಾಕ್ಷಿಯು ಗಣಕೀಕೃತವಾಗಿತ್ತು ಎಂದು ನುಡಿಯುತ್ತಾರೆ. ಎಲ್ಲಿ ಟೈಪ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಕಚೇರಿಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಹೆಬ್ಬಟ್ಟನ್ನು ಹಾಕಲು ಆಕೆಗೆ ಯಾರು ಹೇಳಿರುತ್ತಾರೆ ಎಂದರೆ ನಾನೇ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

5. ಕಾರವಾರಕ್ಕೆ ಹೋಗಿದ ಎಷ್ಟು ವರ್ಷಗಳ ನಂತರ ಆಕೆಯು ಮರಣಪಟ್ಟಿರುತ್ತಾಳೆ ಎಂದರೆ ಸಾಕ್ಷಿಯು ಇದೆ ವರ್ಷ ಮರಣ ಪಟ್ಟಿರುತ್ತಾಳೆ ಎಂದು ನುಡಿಯುತ್ತಾರೆ. ಕಾಗದ ಪತ್ರವನ್ನು ಬರೆಯಲು ನೀವೇನಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಏನು ಎಂದು ಹೇಳಿರುತ್ತೀರಿ ಎಂದರೆ ನಾನು ವಕೀಲರಿಗೆ ಹೇಳಿದ್ದು, ವಕೀಲರು ಹೇಳಿದಂತೆ ಟೈಪ್ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ಕಾಗದ ಪತ್ರವನ್ನು ಮಾಡಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿ ಆಕೆಗೆ ಎಷ್ಟು ವರ್ಷಗಳು ಆಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆಕೆಯನ್ನು ಯಾವುದರ ಮುಖಾಂತರ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿಯು ಓಮ್ನಿಯಲ್ಲಿ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಎಲ್ಲ ಖರ್ಚನ್ನು ನಾನೇ ನೋಡಿಕೊಂಡಿರುತ್ತೇನೆ. 2017 ನೇ ಸಾಲಿನಲ್ಲಿ ಆಕೆಯು ಸ್ವತಃ ಓಡಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಸೇರಿಕೊಂಡು ಸದರಿ ಕಾಗದ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ ಎಂದು ನುಡಿದಿದ್ದು, ನಂತರ ಸರಿಯಲ್ಲ ಎಂದು ನುಡಿಯುತ್ತಾರೆ. ಕಾಗದ ಪತ್ರವನ್ನು ನಿಮ್ಮ ಕೈಯಲ್ಲಿ ಕೊಟ್ಟಿರುತ್ತಾರಾ ಅಥವಾ ನಿಮ್ಮ ಮಗನ ಕೈಯಲ್ಲಿ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ನನ್ನ ಕೈಯಲ್ಲಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಓದು-ಬರಹ ಬರುವುದಿಲ್ಲ. ಕಾಗದ ಪತ್ರದಲ್ಲಿ ಗಣಪಿ ಇವರು ತನ್ನ ಹೆಬ್ಬೆಟ್ಟನ್ನು ಯಾವ ಊರಿನಲ್ಲಿ ಹಾಕಿರುತ್ತಾಳೆ ಎಂದು ನಮೂದು ಇದೆಯಾ ಎಂದರೆ ಸಾಕ್ಷಿಯು ಕಾರವಾರದಲ್ಲಿ

ಹಾಕಿರುತ್ತಾಳೆ ಎಂದು ನುಡಿಯುತ್ತಾರೆ. ನಿಮ್ಮ ಊರಿನಿಂದ ಕಾರವಾರ ನೋಂದಣಿ ಕಚೇರಿ ಎಷ್ಟು ದೂರವಾಗುತ್ತದೆ ಎಂದು ಗೊತ್ತಿರುವುದಿಲ್ಲ. ಆ ದಿನ ಯಾವ ಊರಿನಲ್ಲಿ ಓವ್ನಿ ವಾಹನವನ್ನು ಹತ್ತಿರುತ್ತೀರಿ ಎಂದರೆ ನಮ್ಮ ಮನೆಯಲ್ಲಿಯೇ ಹತ್ತಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಕಾರವಾರ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ಇಳಿದಿರುತ್ತೇವೆ. ಕಾರವಾರ ಸಬ್ ರಿಜಿಸ್ಟ್ರಾರ್ ಕಚೇರಿ ಮಾಳಿಗೆಯ ಮೇಲೆ ಇರುತ್ತದೆ ಎಂದರೆ ಸರಿ. ಮಾಳಿಗೆಯ ಮೇಲೆ ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು 10 ಗಂಟೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

6. ಮಾಳಿಗೆಯ ಮೇಲೆ ನಿಮಗಾಗಲಿ ಅಥವಾ ಗಣಪಿಗಾಗಲಿ ಯಾರಾದರೂ ಮಾತನಾಡಿಸಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕಾರವಾರ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನಮಗೆ ಯಾವುದೇ ಪ್ರಶ್ನೆಯನ್ನು ಕೇಳಿರುವುದಿಲ್ಲ. ಗಣಪಿಗೆ ಏನಾದರೂ ಪ್ರಶ್ನೆ ಕೇಳಿದ್ದರಾ ಎಂದರೆ ಸಾಕ್ಷಿಯು ಕೇಳಿದ್ದು, ಗಣಪಿ ತನ್ನ ಹೆಸರಿಗಿದ್ದ ಜಮೀನನ್ನು ನನ್ನ ಹೆಸರಿಗೆ ಮಾಡುತ್ತಿದ್ದಾರೆ ಎಂದು ಹೇಳಿದ್ದಳು. ನನ್ನ ಪ್ರಕಾರ ಸಾಹೇಬರ್ ಮುಂದೆ ಮಾತನಾಡಿದ್ದನ್ನು ಬಿಟ್ಟರೆ ಬೇರೆ ಎಲ್ಲಿಯೂ ಸಹ ಮಾತನಾಡಿರುವುದಿಲ್ಲ ಎಂದರೆ ಸರಿ. ಗಣಪಿ ದೇವು ಗೌಡ ಇಕಗೆಗ ಮೃತ್ಯು ಪತ್ರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ಹೆಬ್ಬಟ್ಟಿನ ಗುರುತನ್ನೂ ಸಹ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು

ಮತ್ತು ನನ್ನ ಮಗ ಸೇರಿಕೊಂಡು ಬನಾವಟ್ ಕಾಗದ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

7. ಪ್ರತಿವಾದಿಯು ಗಣಪಿ ಗೌಡ ದತ್ತಕ ಮಗಳು ಎಂದರೆ ಸಾಕ್ಷಿಯು ಹೌದು ಎಂದು ನುಡಿದಿದ್ದು, ಸಾಕ್ಷಿಯು ಮುಂದುವರೆದು ಆಕೆಯು ಸಾಯುವ ಕಾಲಕ್ಕೆ ಪ್ರತಿವಾದಿಯು ಎಲ್ಲಿ ಇದ್ದಳು ಎಂದು ಕೇಳುತ್ತಾರೆ. ಗಣಪಿ ಹೆಸರಿಗಿದ್ದ ಆಸ್ತಿಗಳು ಆಕೆಯ ದತ್ತಕ ಮಗಳಾದ ಪ್ರತಿವಾದಿಯ ಹೆಸರಿಗೆ ದಾಖಲಾಗಿರುತ್ತವೆ ಎಂದರೆ ಸಾಕ್ಷಿಯು ಸರಿ. ಆದ ಕಾರಣ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.